ದಿನಾಂಕ 12.06.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1 ಮತ್ತು 2ನೇ ಪ್ರತಿವಾದಿಗಳ ಪರ ಶ್ರೀ ಹೆಚ್.ಜೆ., ವಕೀಲರಿಂದಃ-

13. ನನಗೆ 15 ಎಕರೆಗಿಂದ ಜಾಸ್ತಿ ಜಮೀನು ಇದೆ. ದಾವಾ ಸ್ವತ್ತು ಮಾರಾಟಕ್ಕಿದೆ ಎಂದು ನನ್ನ ಬಳಿ ಬಂದದ್ದು 1ನೇ ಪ್ರತಿವಾದಿ. ಮಾತುಕತೆ ನಾನು, ನನ್ನ ತಂದೆ, ಪ್ರತಿವಾದಿಗಳು ಮತ್ತು ಸಾಕ್ಷಿಗಳ ನಡುವೆ ಆಯಿತು. ಸಾಕ್ಷಿಗೆ ನಿಪಿ-1ನ್ನು ತೋರಿಸಿ ನಿಮಗೆ ಯಾರು ಇದನ್ನು ಕೊಟ್ಟರು ಎಂದರೆ ನಮ್ಮ ತಂದೆ ಎಂದು ನುಡಿಯುತ್ತಾರೆ. ನಿಪಿ-1ರಲ್ಲಿ ಅದು ಎಲ್ಲಿಂದ ಬಂದಿದೆ ಎಂದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1ರ ಪತ್ರ ಎಲ್ಲಿಂದ ಬಂದಿದೆ ಎಂದರೆ ನಮ್ಮ ತಂದೆಯಿಂದ ಬಂದಿದೆ. ನಿಪಿ-1ರಲ್ಲಿ ಆ ಪತ್ರ ಸರ್ಕಾರದಿಂದ ಬಂದಿದೆ ಎಂದು ನಮೂದಾಗಿದೆ. ನಿಪಿ-1 ಸ್ಟ್ಯಾಂಪ್ ಪೇಪರನ್ನು ಯಾರು ತಯಾರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1ರ ಸ್ಟ್ಯಾಂಪ್ ಪೇಪರ್ ಯಾರು ಕೊಟ್ಟಿದ್ದಾರೆಂದು ಸೀಲು, ಸಹಿ ಇಲ್ಲ ಎಂದರೆ ಸಾಕ್ಷಿಯು ವಿಜಯನಗರ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್, ವಿಜಯನಗರ ಶಾಖೆ ಸೀಲು ಇದೆ ಎಂದು ನುಡಿಯುತ್ತಾರೆ.

14. ನೀವು ಓ.ಎಸ್ 431/2001 ದಾವೆಯನ್ನು ಪ್ರಧಾನ ಸಿವಿಲ್ ನ್ಯಾಯಾಲಯ (ಕಿರಿಯ ಶ್ರೇಣಿ), ರಾಮನಗರ ಇಲ್ಲಿ ಕರಾರಿನ ನಿರ್ದಿಷ್ಟ ನಿರ್ವಹಣೆಗಾಗಿ ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ನಮ್ಮ ತಂದೆ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಓ.ಎಸ್ 13/2018 ಇದೇ ನ್ಯಾಯಾಲಯದಲ್ಲಿ

ನಡೆಯುತ್ತಿದೆ ಎಂದರೆ ಸರಿ. ಇ.ಸಿ ನೋಡಿದ ಸಂದರ್ಭದಲ್ಲಿ ದಾವಾ ಸ್ವತ್ತು ಶಿವರುದ್ರಯ್ಯನವರಿಗೆ (1 ನೇ ಪ್ರತಿವಾದಿಯ ತಂದೆ) ಸೇರಿದ್ದು ಎಂದು ನನಗೆ ಕಂಡು ಬಂತು. ನನಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ದಾಖಲೆಗಳನ್ನು ನೋಂದಾಯಿಸುವ, ರದ್ದು ಮಾಡಿಸುವ ಅನುಭವ ಇದೆ ಎಂದರೆ ಸರಿಯಲ್ಲ. ನನಗೆ ಈಗ ತೋರಿಸಲಾದ ಪಹಣಿಯಲ್ಲಿ ಕಾಣುವ ಸರ್ವೇ ನಂ.18/6 ಸ್ವತ್ತಿನ ಸಂಬಂಧವೇ ನನ್ನ ತಂದೆಗೆ ಅಗ್ರಿಮೆಂಟ್ ಆಗಿತ್ತು ಎಂದು ನಾನು ಹೇಳುವುದು ಸದರಿ ದಾಖಲೆ ಸದರಿ ಸ್ವತ್ತಿನ ಪಹಣಿ ಎಂದರೆ ಸರಿ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣುವ ಸ್ವತ್ತಿನ ನೋಂದಣಿಗಾಗಿ 11-ಇ ಸ್ಕೆಚ್ ಅವಶ್ಯಕತೆ ಇಲ್ಲ ಎಂದರೆ ಸರಿ. ನನ್ನ ತಂದೆಗೆ ಕರಾರು ಆಗಿದೆ ಎಂದು ಹೇಳುವ ಕಾಲಕ್ಕೆ ನಿಡಿ-1 ರ ಪಹಣಿಯನ್ನು ನೋಡಿ ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ.

15. ದಾವಾ ಸ್ವತ್ತಿಗೂ ಬೆಂಗಳೂರು-ಮೈಸೂರು ಬೈಪಾಸ್ ರಸ್ತೆಗೆ ಅಂದಾಜು 8 ಕಿ.ಮೀ ದೂರ. ದಾವಾ ಸ್ವತ್ತಿನ ಬೆಲೆ 1 ಎಕರೆಗೆ 80 ರಿಂದ 90 ಲಕ್ಷ ರೂಪಾಯಿ 2015 ರಲ್ಲಿ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸ್ ಅವರಿಗೆ ತಲುಪಿಲ್ಲ ಎಂದರೆ ಸಾಕ್ಷಿಯು 8 ವರ್ಷದ ಪ್ರಕರಣವಾದ್ದರಿಂದ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದಿಯವರು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ನೋಟಿಸ್ ಜಾರಿಯಾಗಿದೆಯಾ ಇಲ್ಲವಾ ಎಂದು ಹೇಳಿ ಎಂದರೆ ಸಾಕ್ಷಿಯು ನಾನು ಪೋಸ್ಟ್ ಮ್ಯಾನ್ ಅಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ಅಂಚೆ ಸ್ವೀಕೃತಿಯಲ್ಲಿ ಪ್ರತಿವಾದಿಗಳ ಸಹಿ ಇದೆಯಾ ಎಂದರೆ ಇಲ್ಲ. ನಾನು ದಾವಾ ಸ್ವತ್ತನ್ನು

ನನ್ನ ಹೆಸರಿಗೆ ನೋಂದಾಯಿಸಿಕೊಳ್ಳಲು ಯಾವಾಗಲೂ ಸಿದ್ಧನಿದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

16. ದಿನಾಂಕ 12.12.2016 ರಂದು 1 ನೇ ಪ್ರತಿವಾದಿ ಕರಳು ಗ್ಯಾಂಗ್ರೀನ್ ಆಗಿ ಆಸ್ಪತ್ರೆಯಿಂದ ಮನೆಗೆ ಬಂದು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ನಿಮ್ಮ ತಂದೆ ಯಾವಾಗ ಎಲ್ಲಿ ಸಹಿ ಮಾಡಿದರು ಎಂದರೆ ಸಾಕ್ಷಿಯು ನನ್ನ ತಂದೆ ಎಲ್ಲಿ ಮಾಡಿಸಿಕೊಂಡು ಬಂದರು ಎಂದು ಗೊತ್ತಿಲ್ಲ, ಆದರೆ ಅದನ್ನು ನನಗೆ ತೋರಿಸಿದರು ಅದು ನನ್ನ ತಂದೆಯ ಸಹಿ ಎಂದು ಗುರುತಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-3 ರ ಸ್ಟ್ಯಾಂಪ್ ಪೇಪರನ್ನು ಯಾರು ತಂದರು ಎಂದು ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಮತ್ತು ಪ್ರತಿವಾದಿಗಳ ಮಧ್ಯೆ ಆಗಿರುವ ದಾಖಲೆ ಎಂದು ನುಡಿಯುತ್ತಾರೆ. ನಿಪಿ-3 ರ ಸ್ಟ್ಯಾಂಪ್ ಪೇಪರ್ ಪರಸ್ಪರ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ, ಬೆಂಗಳೂರುರವರಿಗೆ ಸಂಬಂಧಪಟ್ಟದ್ದು ಎಂದರೆ ಸರಿ. ನಿಪಿ-3 ರ ಸ್ಟ್ಯಾಂಪ್ ಪೇಪರನ್ನು ನಾನೇ ವೈಯಕ್ತಿಕವಾಗಿ ತಂದು ನಾನೇ ಟೈಪ್ ಮಾಡಿಸಿ ಪ್ರತಿವಾದಿಗಳ ಮನೆಗೆ ಹೋಗಿ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 1 ನೇ ಪ್ರತಿವಾದಿಯಿಂದ ಸಹಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ನ್ನು ನಾನೇ ವೈಯಕ್ತಿಕವಾಗಿ ತಯಾರು ಮಾಡಿರುವುದು, ಅದರ ಬಗ್ಗೆ ನನ್ನ ತಂದೆಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-3 ನ್ನು ನೋಂದಣಿ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರ ಹೆಣ್ಣು ಮಕ್ಕಳ ನಡುವೆ ಸಮಸ್ಯೆ ಇತ್ತು ಅದನ್ನು ಬಗೆಹರಿಸಿ ನೋಂದಣಿ ಮಾಡಿಕೊಡುತ್ತೇವೆ ಎಂದು ಹೇಳಿದರು ಎಂದು ನುಡಿಯುತ್ತಾರೆ. ಈ ವಿಚಾರ ನಿಪಿ-3 ರಲ್ಲಿ ಇಲ್ಲ.

17. ನಾವು ಹೇಳಿದಂತೆ ಯಾವುದೇ ಕ್ರಯದ ವ್ಯವಹಾರ ನಮ್ಮ ತಂದೆ ಮತ್ತು ಪ್ರತಿವಾದಿಗಳ ನಡುವೆ ಆಗಿಲ್ಲ ಎಂದರೆ ಸರಿಯಲ್ಲ. ದಿನಾಂಕ 31.10.2015 ರ ಮುಂಚಿನಿಂದಲೂ ಪ್ರತಿವಾದಿಗಳು ನನ್ನ ಜೊತೆ ಲೇವಾದೇವಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿನಾಂಕ 31.10.2015 ರಂದು ನಿಮ್ಮ ಖಾತೆಯಿಂದ ನಿಮ್ಮ ತಂದೆಗೆ ಖಾತೆಗೆ ಹಣ ವರ್ಗಾಯಿಸಿ ನಿಮ್ಮ ತಂದೆಯ ಖಾತೆಯಿಂದ ಪ್ರತಿವಾದಿಗಳಿಗೆ 6 ಲಕ್ಷ ರೂಪಾಯಿಗಳನ್ನು ಚೆಕ್ ಮುಖಾಂತರ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ನೆನಪಿಲ್ಲ, ಬ್ಯಾಂಕಿನಲ್ಲಿ ಪರಿಶೀಲಿಸಬೇಕು ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ 10 ಲಕ್ಷ ರೂಪಾಯಿ ನಾವು ಪಾವತಿಸಿಲ್ಲ, 6 ಲಕ್ಷ ರೂಪಾಯಿ ಮಾತ್ರ ಪ್ರತಿವಾದಿಗಳಿಗೆ ನಿಪಿ-1 ರ ಪ್ರಕಾರ ಕೊಟ್ಟಿರುವುದು ಎಂದರೆ ಸರಿಯಲ್ಲ. 4 ಲಕ್ಷ ರೂಪಾಯಿಗಳನ್ನು ಪ್ರತಿವಾದಿಗಳಿಗೆ ನಗದಾಗಿ ಕೊಟ್ಟಿರುವ ಬಗ್ಗೆ ಅಧಿಕೃತ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಅಗ್ರಿಮೆಂಟ್ ಕಾಲಕ್ಕೆ ನನ್ನ ತಂದೆ ಸಾಕ್ಷಿದಾರರ ಮೂಲಕ ಕೊಟ್ಟಿದ್ದೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

18. ಎರಡೂವರೆ ಲಕ್ಷ ರೂಪಾಯಿಗಿಂತ ಹೆಚ್ಚಿನ ವ್ಯವಹಾರ ಮಾಡುವಾಗ ಚೆಕ್ ಅಥವಾ ಡಿ.ಡಿ ಮೂಲಕ ಪಾವತಿಸಬೇಕೆಂಬ ನಿಯಮ ಇದೆ ಎಂದರೆ ಸಾಕ್ಷಿಯು ಈಗ ಇದೆ ಎಂದು ನುಡಿಯುತ್ತಾರೆ. ಕ್ರಯಪತ್ರ ನೋಂದಣಿ ಮಾಡಿಕೊಡಿ ಎಂದು ದಿನಾಂಕ 31.10.2015 ರಿಂದ 15 ತಿಂಗಳ ಅವಧಿಯೊಳಗೆ ಪ್ರತಿವಾದಿಗಳಿಗೆ ನೋಟಿಸ್ ಕೊಟ್ಟಿಲ್ಲ. ಸಾಕ್ಷಿಯು ಮುಂದುವರೆದು ದಿನಾಂಕ 12.12.2016 ಕ್ಕೆ 4,45,000/- ರೂಪಾಯಿ ಕೇಳಿದರು ನಾವು ಕೊಟ್ಟೆವು ಅವರು ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ

ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಮುಂದುವರೆದ ಅಗ್ರಿಮೆಂಟ್ ಎಂದು ಬರೆದಿದೆ. ಅದು ಪ್ಯಾರಾ ನಂ.3 ರಲ್ಲಿ. ದಿನಾಂಕ 12.12.2016 ರಂದು 1 ನೇ ಪ್ರತಿವಾದಿ ಮನೆಯಲ್ಲಿ ಕರಳು ಗ್ಯಾಂಗ್ರೀನ್‌ನಿಂದ ನರಳುತ್ತಿದ್ದಾಗ ನೀವು ವೈಯಕ್ತಿಕವಾಗಿ 2 ಲಕ್ಷ ರೂಪಾಯಿಗಳನ್ನು 1 ನೇ ಪ್ರತಿವಾದಿಗೆ ಕೊಟ್ಟಿದ್ದೀರಿ, ಒಟ್ಟು 8 ಲಕ್ಷ ಮಾತ್ರ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಅನಾರೋಗ್ಯದ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ನಾನೇ ವೈಯಕ್ತಿಕವಾಗಿ ನಿಪಿ-3 ನ್ನು 14,45,000/- ರೂಪಾಯಿಗಳಿಗೆ ಪ್ರತಿವಾದಿಗಳಿಗೆ ಪ್ರಭಾವ ಬೀರಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

19. 8 ಲಕ್ಷ ರೂಪಾಯಿಗಳನ್ನು ನಿಮ್ಮ ತಂದೆ ಪ್ರತಿವಾದಿಗಳಿಗೆ ಕೊಟ್ಟಿಲ್ಲ, 8 ಲಕ್ಷ ರೂಪಾಯಿಗಳನ್ನು ನೀವು ವೈಯಕ್ತಿಕವಾಗಿ ಸಾಲವಾಗಿ ಪ್ರತಿವಾದಿಗಳಿಗೆ ಕೊಟ್ಟಿರುವುದು ಎಂದರೆ ಸರಿಯಲ್ಲ. 8 ಲಕ್ಷ ರೂಪಾಯಿಗಳ ಸಾಲದ ಭದ್ರತೆಗಾಗಿ ಪ್ರತಿವಾದಿಗಳು ನಿಪಿ-2 ಮತ್ತು ನಿಪಿ-3 ನ್ನು ನಮ್ಮ ತಂದೆಯ ಹೆಸರಿಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ-2 ಮತ್ತು ನಿಪಿ-3 ರ ಹಣವನ್ನು ನೀವು ಕೊಟ್ಟು ಪತ್ರವನ್ನು ನಿಮ್ಮ ತಂದೆಯ ಹೆಸರಿಗೆ ಬೇನಾಮಿ ಹೆಸರಿನಲ್ಲಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು, ಈಗಲೂ ನನ್ನ ತಂದೆಯ ಹೆಸರಿನಲ್ಲಿನ 10 ಲಕ್ಷ ರೂಪಾಯಿ ಎಫ್.ಡಿ ಇದೆ ನುಡಿಯುತ್ತಾರೆ. ನಿಪಿ-2 ಮತ್ತು ನಿಪಿ-3 ದಾಖಲೆಗಳ ಬಗ್ಗೆ ನನ್ನ ತಂದೆಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವಇಚ್ಛೆಯಿಂದ ನನ್ನ ತಂದೆ ಆದಾಯ ತೆರಿಗೆ ಪಾವತಿದಾರರು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಗೊತ್ತಿಲ್ಲದ ಹಾಗೆ ನಾನೇ ವ್ಯವಹಾರ ಮಾಡಿದ್ದು, ನಮ್ಮ ತಂದೆ ಸಬ್ ರಿಜಿಸ್ಟ್ರಾರ್ ಕಛೇರಿಗೆ ಬಂದು ನಾನು

ಕರೆದಾಗ ಸಹಿ ಮಾಡಲು ಮಾತ್ರ ಅವರ ಕೆಲಸ ಎಂದರೆ ಸರಿಯಲ್ಲ.

**20.** ನಾನು ಬಿ.ಎಂ.ಟಿ.ಸಿ ಡಿಪೋ ಮ್ಯಾನೇಜರ್ ಎಂದರೆ ಸರಿ. ನಿಪಿ-2 ರ ಸಾಕ್ಷಿದಾರರಾದ ಶಿವಕುಮಾರ್ ಬಸ್ ಚಾಲಕ ಎಂದರೆ ಸರಿ. ಆತನು ನಾನು ಅಲ್ಲಿ ಸರ್ವಿಸ್ ಮಾಡುವಾಗ ಪರಿಚಯ. ಆತನು ನಾನು ಕರೆದಾಗ ನಾನು ಹೇಳಿದ ಕೆಲಸವನ್ನು ಬಂದು ಮಾಡಿಕೊಡುತ್ತಿದ್ದ ಎಂದರೆ ಸರಿಯಲ್ಲ. ಸದರಿ ಶಿವಕುಮಾರ್ ಮಾಗಡಿ ತಾಲ್ಲೂಕು ಚಕ್ರಬಾವಿ ಗ್ರಾಮದವರು ಎಂದರೆ ಸರಿ. ಸದರಿ ಶಿವಕುಮಾರ್‌ರವರನ್ನು ರಾಮನಗರ ಸಬ್ ರಿಜಿಸ್ಟ್ರಾರ್ ಕಛೇರಿಗೆ ಕರೆಸಿ ಅವನಿಂದ ನನಗೆ ಮುಂದೆ ಅನುಕೂಲ ಆಗಲಿ ಎಂದು ಆತನನ್ನು ಸಾಕ್ಷಿದಾರನನ್ನಾಗಿ ಸಹಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು ಓ.ಎಸ್ 13/2018 ರಲ್ಲಿ ಕೊಟ್ಟಿರುವ ಎಸ್.ಪಿ.ಎ ಯನ್ನು ನಿಮ್ಮ ತಂದೆ ಒಂದೇ ದಿವಸ ಬರೆದುಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಹಳೇ ಪ್ರಕರಣವಾದ್ದರಿಂದ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಆ ದಾಖಲೆ ಓ.ಎಸ್ 13/2018 ರಲ್ಲಿ ನಿಮ್ಮ ತಂದೆ ಬರೆದುಕೊಟ್ಟಿರುವ ಜಿ.ಪಿ.ಎ.,ನ ದೃಢೀಕೃತ ನಕಲು ಎಂದರೆ ಸರಿ. ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ನಿಡಿ-2 ಜಿ.ಪಿ.ಎ ಮತ್ತು ಈ ಕೇಸಿನ ಎಸ್.ಪಿ.ಎ ಎರಡೂ ಒಂದೇ ದಿವಸ ಆಗಿರುವ ದಾಖಲೆಗಳು ಎಂದರೆ ಸರಿ. ಸಾಕ್ಷಿಯು ನನ್ನ ತಂದೆಗೆ ಕಣ್ಣು ಕಾಣುವುದಿಲ್ಲ ಎಂದು ನುಡಿದು ನಂತರ ಅವರಿಗೆ ಒಂದು ಕಣ್ಣು ಕಾಣುವುದಿಲ್ಲ ಎಂದು ಸ್ವಇಚ್ಛೆಯಿಂದ ನುಡಿದಿರುತ್ತಾರೆ.

**21.** ನಿಪಿ-11 ನ್ನು 1 ನೇ ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲದಿದ್ದರೂ

ಅವರಿಗೆ ಒತ್ತಡ ತಂದು ಬರೆಸಿದ್ದೀರಿ ಎಂದರೆ ಸಾಕ್ಷಿಯು ನಿಪಿ-11 ನ್ನು ಓದಿ ಅವರೇ ಬರೆದುಕೊಟ್ಟಿರುವ ದಾಖಲೆ ಎಂದು ನುಡಿದಿರುತ್ತಾರೆ. ನಿಪಿ-11 ರಲ್ಲಿರುವ ಬರವಣಿಗೆ ನನ್ನದೇ ಬರವಣಿಗೆ ಎಂದರೆ ಸರಿಯಲ್ಲ. ನಿಪಿ-11 ರ ಕಾಲಕ್ಕೆ 1 ನೇ ಪ್ರತಿವಾದಿಗೆ ಹುಷಾರಿಲ್ಲದೇ ಅದನ್ನು ಅವರು ಬರೆದುಕೊಡುವ ಪರಿಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಮತ್ತು ನಿಪಿ-3 ನ್ನು 8 ಲಕ್ಷ ರೂಪಾಯಿಗಳ ಸಾಲಕ್ಕಾಗಿ ನನ್ನಿಂದ ಪಡೆದು ಅದರ ಭದ್ರತೆಗಾಗಿ ಪ್ರತಿವಾದಿಗಳು ಬರೆದುಕೊಟ್ಟಿರುವುದು ಎಂದರೆ ಸರಿಯಲ್ಲ.

22. ನಿಪಿ-1 ರಿಂದ ನಿಪಿ-3 ಮತ್ತು ನಿಪಿ-11 ರ ಬಗ್ಗೆ ನನ್ನ ತಂದೆಗೆ ಮಾಹಿತಿ ಇಲ್ಲ, ನಾನು ಅವುಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಿಂದ ನಿಪಿ-3 ಮತ್ತು ನಿಪಿ-11 ದಾಖಲೆಗಳು ಆಗಿರುವ ಬಗ್ಗೆ ನೀವು ನಿಮ್ಮ ತಂದೆಯ ಗಮನಕ್ಕೆ ತಂದೇ ಇಲ್ಲ ಎಂದರೆ ಸಾಕ್ಷಿಯು ಅವರೇ ಕೊಟ್ಟದ್ದು ಎಂದು ನುಡಿದಿರುತ್ತಾರೆ. ನಿಮ್ಮಿಂದ ಪಡೆದಿದ್ದ 8 ಲಕ್ಷ ರೂಪಾಯಿಗಳನ್ನು ಪ್ರತಿವಾದಿಗಳು ಸಾಲವಾಗಿ ಪಡೆದಿದ್ದು ಅದನ್ನು ಅವರು ಈಗಲೂ ಪಾವತಿಸಲು ಸಿದ್ಧನಿದ್ದಾರೆ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ, ಜಮೀನನ್ನು ಕ್ರಯಕ್ಕೆ ಪಡೆದಿರುವುದು ಎಂದು ನುಡಿದಿರುತ್ತಾರೆ. ದಾವಾ ಸ್ವತ್ತು ಸುಮಾರು ಒಂದೂವರೆ ಕೋಟಿ ಬೆಲೆ ಬಾಳುತ್ತಿದ್ದು ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಇಚ್ಚೆಯಿಂದ ಗೆಜೆಟ್ ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ : ಇಲ್ಲ

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)**

**(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)**

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.